ಸ್ವ 1884ನೇ ಇಸವಿ ಮೇ ತಿಂಗಳ ಕಾಲಸ್ಥಿತಿ ರಿಪೋರ್ಟುಗಳು.

ಬೆಂಗಳೂರು ಡಿಸ್ಟ್ರಿಕ್ಟ್.

ಮಳೆ.—ಬೆಂಗಳೂರ್ ಪಹರಿನಲ್ಲಿ 2 ಅಂಗುಲ 35 ಸೆಂಟ್ಸ್ ಮಳೆ ಆಗಿಯಲ್ಪಟ್ಟಿರುತ್ತೆ.

ಬೆಳೆಗಳು.—ಬೆಳೆಯಲ್ಲಿರುವ ಫಸಲ್‌ಗಳು ವಳ್ಳೆ ಸ್ಥಿತಿಯಲ್ಲಿವೆ. ಆಗುವ ಕೆಲಸಗಳು ಅಭಿವೃದ್ಧಿಯಲ್ಲಿವೆ. ಕೆಲವು ಪ್ರದೇಶಗಳಲ್ಲಿ ಗನ್ನಾ ಮತ್ತು ಪೂಜಿ ಭತ್ತ ಬಿತ್ತಲ್ಪಟ್ಟವು; ಮತ್ತು ವೈಶಾಖಿ ಫಸಲು ಕಟುವಾಯಿತು.

ಜನಾರೋಗ್ಯ.—ಚನ್ನಾಗಿದೆ. ಜ್ವರ ವುಪದ್ರವವು ನೆಲಮಂಗಲ ತಾಲ್ಲೂಕು ಪೈಕೀ ಕೆಲವು ಗ್ರಾಮಗಳಲ್ಲಿ ವ್ಯಾಪಿಸಿದೆ.

ಕಾಲ್ನಡೆ.—ಆರೋಗ್ಯವಾಗಿದೆ. ಹೊಸಕೋಟೆ ಮತ್ತು ಮಾಗಡಿ ತಾಲ್ಲೂಕುಗಳಲ್ಲಿ ಸ್ವಲ್ಪ ಮಟ್ಟಿಗೆ ಗೋಮಾರಿ ರೋಗವು ವುಂಟಾಗಿದೆ. ಯಲ್ಲಾ ಕಾರಣಗಳಿಂದಲೂ 2,187 ಕಾಲ್ನಡೆಗಳು ಮೃತಪಟ್ಟವು; ಈ ಪೈಕಿ 207 ಕಾಡುಮೃಗಗಳಿಂದ ನಷ್ಟವಾದವು.

ಜನಮರಣ.—ಏಪ್ರೆಲ್ ತಿಂಗಳಲ್ಲಿ 597 ಮಂದಿ ಹೋದರು, ಮಾರ್ಚಿಯಲ್ಲಿ 569 ಮಂದಿ ಹೋದರು; ವೊಕ್ಕಾ ಬಿಲೆ 28 ಜಾಸ್ತಿ, ಮುಖ್ಯವಾಗಿ ಜ್ವರದಿಂದಲೇ ಮರಣ ವುಂಟಾಗಿರುತ್ತೆ.

ಜಮ್ಮಿಗಳು—ಸಾಗುವಳಿ ಬಗ್ಗೆ 3,365–10–1 ಕಂದಾಯವುಳ್ಳ ಜಮ್ಮಿಗಳು ತೆಗದುಕೊಳ್ಳಲ್ಪಟ್ಟವು; ಮತ್ತು 959–8–8 ಕಂದಾಯವುಳ್ಳ ಜಮ್ಮಿಗಳಿಗೆ ರಾಜೀನಾಮೆ ಕೊಡಲ್ಪಟ್ಟವು.

ಎ. ಯಚ್. ಮೆಕ್ಕೆಂಟೈರ್,
ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟ್.

ತಾಲ್ಲೂಕುಗಳಲ್ಲಿ		ಮಳೆ ಅಂ.	ಸೆಂಟ್ಸ್.	ತಾಲ್ಲೂಕುಗಳಲ್ಲಿ		ಮಳೆ ಅಂ.	ಸೆಂಟ್ಸ್.
ತರೀಕೆರೆ	..	1	50	ಲಕ್ಕವಳ್ಳಿ	..	1	40
ಕೊಪ್ಪ	..	1	48	ಹಾಸನ	..	4	25
ಚಿಕ್ಕಮಗಳೂರು	..	1	97	ಬೇಲೂರು	..	3	18
ಕಡೂರು	..	1	16	ಮಂಜರಾಬಾದ್	..	5	8
ಮೂಡಿಗೆರೆ	..	1	10	ಅರಕೇಕೆರೆ	..	1	93¾

ಬೀಜ ಪೇರಾವಾದ್ದು.—ತರೀಕೆರೆ ತಾಲ್ಲೂಕಿನಲ್ಲಿ ಗನ್ನ, ತರೀಕೆರೆ, ಕೊಪ್ಪ, ಚಿಕ್ಕಮಗಳೂರು, ಹಾಸನ, ಮಂಜರಾಬಾದು, ಬೇಲೂರು ವ ಮೂಡಿಗೆರೆ ತಾಲ್ಲೂಕುಗಳ ಕೆಲವು ಪ್ರದೇಶಗಳಲ್ಲಿ ನೆಲ್ಲು; ಚಿಕ್ಕಮಗಳೂರು, ಹಾಸನ, ಮಂಜರಾಬಾದು ಮತ್ತು ಬೇಲೂರು ತಾಲ್ಲೂಕುಗಳಲ್ಲಿ ರಾಗಿ, ಕಡೂರು ತಾಲ್ಲೂಕಿನಲ್ಲಿ ಜವೆಗೋಧಿ, ಈರುಳ್ಳಿ, ಉದ್ದು, ಮತ್ತು ಹೆಸರು; ಹಾಸನ ಬೇಲೂರು ತಾಲ್ಲೂಕುಗಳಲ್ಲಿ ಹುಚ್ಚೆಳ್ಳು; ಹಾಸನ, ಬೇಲೂರು ತಾಲ್ಲೂಕುಗಳಲ್ಲಿ ತೊಗರಿ, ಬೇಲೂರು ತಾಲ್ಲೂಕಿನಲ್ಲಿ ಅವರೆ ಮತ್ತು ಅಲಸಂದಿ ಪೇರಾವಾದವು.

ಬೆಳೆಗಳ ಸ್ಥಿತಿ.—ಬೆಳೆಗಳು ಚನ್ನಾಗಿವೆ. ಮೂಡಗೆರೆ ತಾಲ್ಲೂಕಿನಲ್ಲಿ ಮಧ್ಯಸ್ಥವಾಗಿದೆ. ಚಿಕ್ಕಮಗಳೂರು ಮತ್ತು ಬೇಲೂರು ತಾಲ್ಲೂಕುಗಳ ಕೆಲವು ಭಾಗಗಳಲ್ಲಿ ವಣಗುತ್ತಲಿವೆ.

ಫಸಲ್ ಕಟುವಾದ್ದು.—ತರೀಕೆರೆ, ಚಿಕ್ಕಮಗಳೂರು, ಮಂಜರಾಬಾದ್ ಬೇಲೂರು ವ ಅರಕೆಕೆರೆ ತಾಲ್ಲೂಕುಗಳಲ್ಲಿ ನೆಲ್ಲು ಮತ್ತು ತರೀಕೆರೆ ತಾಲ್ಲೂಕಿನಲ್ಲಿ ಗನ್ನ ಕಟುವಾದವು.

ಕಾಲಸ್ಥಿತಿ—ಚನ್ನಾಗಿದೆ.

ಜನಾರೋಗ್ಯ.—ಮೂಡಗೆರೆ ತಾಲ್ಲೂಕಿನ ಕೆಲವು ಪ್ರದೇಶಗಳಲ್ಲಿ ಡಬ್ಬೂ, ಕೊಪ್ಪ, ಚಿಕ್ಕಮಗಳೂರು, ಹಾಸನ ವ ಕಡೂರು ತಾಲ್ಲೂಕುಗಳಲ್ಲಿ ಜ್ವರವೂ, ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಆಮಶಂಕೆಯೂ ಕಡೂರು ತಾಲ್ಲೂಕಿನಲ್ಲಿ ಕಂಣು ನೋವೂ ವುಂಟಾಗಿವೆ.

ಕಾಲ್ನಡೆ.—ಚಿಕ್ಕಮಗಳೂರು ತಾಲ್ಲೂಕಿನಲ್ಲಿ ಕಾಲುಜರ ಮತ್ತು ತರೀಕೆರೆ ತಾಲ್ಲೂಕಿನಲ್ಲಿ ಚಪ್ಪೆ ರೋಗ ವ್ಯಾಪಿಸಿದ್ದವು. ಈ ತಿಂಗಳೊಳಗೆ 718 ಆ ಹಿಂದಿನ ತಿಂಗಳಲ್ಲಿ 686 ಕಾಲ್ನಡೆಗಳು ಹೋದವು.

ಜಮ್ಮಿಗಳು—ಸಾಗುವಳಿ ಬಗ್ಗೆ 4,906—1—3 ಕಂದಾಯವುಳ್ಳ ಜಮ್ಮಿಗಳು ಹೊಸದಾಗಿ ತೆಗದುಕೊಳ್ಳಲ್ಪಟ್ಟವು, 8,044–8–2 ಕಂದಾಯವುಳ್ಳ ಜಮ್ಮಿಗಳಿಗೆ ರಾಜೀನಾಮೆ ಕೊಡಲ್ಪಟ್ಟವು.

ದಾರಣೆಗಳು—ಯೇಕರೀತಿಯಾಗಿವೆ.

ಜಿ. ಯಫ್. ಮೈಕಲ್ಜಾರ್,
ಡೆಪ್ಯುಟಿ ಕಮ್ಮಿಷನರ್.